ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಉಮೇಶ್ ವಿ ಕತ್ತಿ, (ತೋಟಗಾರಿಕೆ) ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ, ಭಾರತದ ಸಂವಿಧಾನದ 213(2)(ಎ) ಅನುಚ್ಛೇದದ ಮೇರೆಗೆ:

ಕರ್ನಾಟಕ ರಾಜ್ಯದಲ್ಲಿ ಪ್ರತ್ಯೇಕ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕಾಗಿ ಮತ್ತು ನಿಗಮಿತಗೊಳಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂದಪಟ್ಟ ವಿಷಯಗಳಿಗೆ ಉಪಬಂದ ಕಲ್ಪಿಸುವ ಸಂಬಂಧ ಹೊರಡಿಸಿರುವ ಸಂವ್ಯಶಾಇ/27/ಶಾಸನ/2008, ದಿನಾಂಕ 02.06.2009ರ ಆಧ್ಯಾದೇಶ ಸಂಖ್ಯೆ 3ನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, (ಅಬಕಾರಿ) ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ, 1965ರ ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 71(4) ರ ಮೇರೆಗೆ:

1. 2008ರ ಕರ್ನಾಟಕ ಅಬಕಾರಿ (ಮದ್ಯ ತಯಾರಿಕೆ) ನಿಯಮಗಳನ್ನು ರಚಿಸಿ ದಿನಾಂಕ **27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(i)**ನೇ ಸಂಖ್ಯೆಯ ಅಧಿಸೂಚನೆ.

2. 1985ರ ಕರ್ನಾಟಕ ಅಬಕಾರಿ (ಗುತ್ತಿಗೆ ಅಧಿಕಾರಿಯುಕ್ತ ಚಿಲ್ಲರೆ ಸಾರಾಯಿ ಮಾರಾಟ) ಕಾಯ್ದೆಯಡಿ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ/20/ಪಿಇಎಸ್/2005(ii), ದಿನಾಂಕ 01.07.2008ನ್ನು ರದ್ದುಪಡಿಸಿ, **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(ii)**ನೇ ಸಂಖ್ಯೆಯ ಅಧಿಸೂಚನೆ.

3. 2008ರ ಕರ್ನಾಟಕ ಅಬಕಾರಿ (ಗುತ್ತಿಗೆ ಅಧಿಕಾರಯುಕ್ತ ಚಿಲ್ಲರೆ ಸಾರಾಯಿ ಮಾರಾಟ) ನಿಯಮಗಳನ್ನು ರಚಿಸಿ **ದಿನಾಂಕ 27.09.2008**ರಂದು ಹೊರಡಿಸಲಾಧ **ಎಫ್‌ಡಿ/20/ಪಿಇಎಸ್/2005(iii)**ನೇ ಸಂಖ್ಯೆಯ ಅಧಿಸೂಚನೆ.

4. 1968ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕಗಳು) ನಿಯಮಗಳ ನಿಯಮ 2ಎಎ ಮತ್ತು ಅನುಸೂಚಿ "ಡಿ" ಗೆ ತಿದ್ದುಪಡಿ ಹಾಗೂ ಹೊಸ ನಿಯಮ 2ಎಡಿಇಯನ್ನು ಸೇರಿಸಿ **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(iv)**ನೇ ಸಂಖ್ಯೆಯ ಅಧಿಸೂಚನೆ.

5. 1968ರ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ಮದ್ಯ ತಯಾರಿಕೆ) ನಿಯಮಗಳ ನಿಯಮದ ಶೀರ್ಷಿಕೆ, ನಿಯಮ 2ರ ಹಾಗೂ ವೈನ್ ಎಂಬ ಪದದ ಬದಲಿಗೆ "ಫಾರ್ಟಿಫೈಡ್ ವೈನ್" ಎಂಬ ಪದವನ್ನು ತಿದ್ದುಪಡಿಗೊಳಿಸಿ **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(v)**ನೇ ಸಂಖ್ಯೆಯ ಅಧಿಸೂಚನೆ.

6. 1967ರ ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನ ಸಾಗಾಣಿಕೆ ಮತ್ತು ಅಮಲೇರಿಸುವ ವಸ್ತುಗಳ ಆಮದು ಮತ್ತು ರಫ್ತು) ನಿಯಮಗಳ ನಿಯಮ 21ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(vi)**ನೇ ಸಂಖ್ಯೆಯ ಅಧಿಸೂಚನೆ.

7. 1967ರ ಕರ್ನಾಟಕ ಅಬಕಾರಿ (ಬಾಟ್ಲಿಂಗ್ ಆಫ್ ಲಿಕ್ಕರ್ಸ್) ನಿಯಮಗಳ ನಿಯಮ 5 ಹಾಗೂ 10ಎಗೆ ತಿದ್ದುಪಡಿ ಮಾಡಿ **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(vii)**ನೇ ಸಂಖ್ಯೆಯ ಅಧಿಸೂಚನೆ.

8. 1968ರ ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿಯ ಮದ್ಯ ಮಾರಾಟ ನಿಯಮಗಳ ನಿಯಮ 3, 3ಎ, 8, ಹಾಗೂ ನಮೂನೆ ಸಿಎಲ್-16ಕ್ಕೆ ತಿದ್ದುಪಡಿ ಮಾಡಿ ಹಾಗೂ ನಮೂನೆ ಸಿಎಲ್-17 ಮತ್ತು 18ನ್ನು ಹೊಸದಾಗಿ ಸೇರ್ಪಡೆಗೊಳಿಸಿ **ದಿನಾಂಕ 22.11.2008**ರಂದು ಹೊರಡಿಸಲಾದ **ಎಫ್‌ಡಿ/3/ಪಿಇಎಸ್/2008**ನೇ ಸಂಖ್ಯೆಯ ಅಧಿಸೂಚನೆ.

9. 1968ರ ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶೀಯ ಮದ್ಯ ಮಾರಾಟ) ನಿಯಮಗಳ ನಮೂನೆ ಸಿಎಲ್-2ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 15.01.2009**ರಂದು ಹೊರಡಿಸಲಾದ **ಎಫ್‌ಡಿ/7/ಪಿಇಎಸ್/2008(i)**ನೇ ಸಂಖ್ಯೆಯ ಅಧಿಸೂಚನೆ.

10. 1967ರ ಕರ್ನಾಟಕ ಅಬಕಾರಿ ಪರವಾನಿಗೆಗಳು (ಸಾಮಾನ್ಯ ಷರತ್ತುಗಳು) ನಿಯಮಗಳ ನಿಯಮ 23ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 15.01.2009**ರಂದು ಹೊರಡಿಸಲಾದ **ಎಫ್‌ಡಿ/7/ಪಿಇಎಸ್/2008(ii)**ನೇ ಸಂಖ್ಯೆಯ ಅಧಿಸೂಚನೆ.

11. 1968ರ ಕರ್ನಾಟಕ ಅಬಕಾರಿ (ಭಾರತೀಯ ಮದ್ಯಗಳ ಮಾರಾಟ) ನಿಯಮಗಳ ನಿಯಮದ ಅನುಸೂಚಿ ಡಿ ಗೆ ತಿದ್ದುಪಡಿ ಮಾಡಿ **ದಿನಾಂಕ 3003.2009**ರಂದು ಹೊರಡಿಸಲಾದ **ಎಫ್‌ಡಿ/4/ಪಿಇಎಸ್/2009**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಗಿದೆ.

4. ಚುನಾವಣಾ ಪ್ರಸ್ತಾಪ
ವಿಷಯ: ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸುವ ಬಗ್ಗೆ

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ,

ಅ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 265 (1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 268(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ 18 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಇ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 271 (1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಈ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 272 (1)ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕುಬಾಧ್ಯತೆಗಳ ಸಮಿತಿಗೆ 9 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಉ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 277 (1)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.